ಮನಮುಟ್ಟುವಂತೆ ಕಟ್ಟಿಕೊಡುತ್ತಾರೆ. ತನ್ನ ವಿದ್ಯಾರ್ಥಿಗಳಿಗೆ ಇರಾನ್ ದೇಶದ ಕ್ಲಾಸಿಕ್ ಸಿನಿಮಾ 'ದ ಕೌ' ತೋರಿಸುತ್ತಿರುವಾಗ ಎಮಾದ್ ನಿದ್ದೆಗೆ ಜಾರುತ್ತಾನೆ. ಆಗ ವಿದ್ಯಾರ್ಥಿಗಳು ಮೊಬೈಲಿನಲ್ಲಿ ವಿಡಿಯೊ ಮಾಡುವಂತಹ ವಯೋಸಹಜ ಕೀಟಲೆಗಳಿಗೆ ಮುಂದಾಗುತ್ತಾರೆ. ಎಚ್ಚರಗೊಂಡ ಎಮಾದ್ ವಿದ್ಯಾರ್ಥಿಯೊಬ್ಬನ ಮೇಲೆ ಕೂಗಾಡುತ್ತಾನೆ. ಸದಾ ಸ್ನೇಹಮಯಿಯಾಗಿದ್ದ ಮೇಷ್ಟ್ರ ವರ್ತನೆ ಆ ವಿದ್ಯಾರ್ಥಿಗಳಿಗೆ ಎಷ್ಟು ಆಘಾತ ಉಂಟುಮಾಡುತ್ತದೆಯೋ ಅಷ್ಟೇ ಆಘಾತ ಸಿನಿಮಾ ಪ್ರೇಕ್ಷಕನಿಗೂ ಆಗುತ್ತದೆ. ಈ ಸನ್ನಿವೇಶವನ್ನು 'ದ ಕೌ' ಸಿನಿಮಾ ವೀಕ್ಷಣೆಯೊಂದಿಗೆ ಬೆಸೆದಿರುವುದು ಕೂಡ ವಿಶೇಷವೇ. ಈ ಸಿನಿಮಾದಲ್ಲಿ ಮುಖ್ಯ ಪಾತ್ರಧಾರಿ, ತನ್ನ ನೆಚ್ಚಿನ ಹಸುವೊಂದು ಅಸು ನೀಗಿದಾಗ, ಆ ಆಘಾತ ತಡೆಯಲಾರದೆ ಹಸುವಾಗಿಯೇ ಪರಿವರ್ತನೆಗೊಂಡು, ಹಸುವಿನಂತೆಯೇ ವರ್ತಿಸಲು ಪ್ರಾರಂಭಿಸುತ್ತಾನೆ. ಇದು ಒಂದು ರೀತಿಯ ಕಾಫ್ಕಾಯಸ್ಕ್ ಎನ್ನಬಹುದಾದ ರೂಪಾಂತರ. ಕಾಫ್ಕಾನ ಮೆಟಮಾರ್ಫಸಿಸ್ ಕತೆಯಲ್ಲಿ ಕೂಡ ರೂಪಾಂತರಗೊಳ್ಳುವ ಮುಖ್ಯ ಪಾತ್ರಧಾರಿ ಸೇಲ್ಸ್ ಮ್ಯಾನ್. ಇಲ್ಲಿ 'ಡೆತ್ ಆಫ್ ಎ ಸೇಲ್ಸ್ ಮ್ಯಾನ್' ನಾಟಕ ಆಡುತ್ತಿರುವ ಎಮಾದ್ ಒತ್ತಡಗಳಿಂದ ಸೇಲ್ಸ್ ಮ್ಯಾನ್ ವಿಲ್ಲಿ ಆಗಿ ಬದಲಾಗುತ್ತಾ, ಅಸಹನೆಯ, ಗೊಂದಲದ ಗೂಡಾಗುತ್ತಾನೆ. ತನ್ನ ಈ ಸ್ಥಿತಿಗೆ ಕಾರಣವಾದ ಆ ಆಗಂತುಕನನ್ನು ಪತ್ತೆ ಮಾಡಿ ಅವನ ಮೇಲೆ ಹಗೆ ಸಾಧಿಸುವುದೇ ಅವನ ಪ್ರಮುಖ ಗುರಿಯಾಗುತ್ತದೆ.

ಇನ್ನು ಮುಂದೆ ನಡೆಯುವ ಘಟನೆಗಳು ಮನುಷ್ಯತ್ವದ ಅಸ್ತಿತ್ವವನ್ನೇ ಗಾಢವಾಗಿ ಅವಲೋಕಿಸುವಂತಹ ದೃಶ್ಯಾವಳಿಗಳು. ತನ್ನ ಈ ಸ್ಥಿತಿಗೆ ಕಾರಣವಾದ ಅಪರಿಚಿತನನ್ನು ಎಮಾದ್ ಪತ್ತೆ ಹಚ್ಚುತ್ತಾನೆ. ಅವನೊಬ್ಬ ವೃದ್ಧ. ಆ ಮನೆಯ ಹಿಂದಿನ ಬಾಡಿಗೆದಾರಳ ಜೊತೆಗಿನ ಸ್ನೇಹದೊಂದಿಗೆ ಅಲ್ಲಿಗೆ ಹೋಗಿದ್ದಾಗಿಯೂ, ನಡೆದ ದುರ್ಘಟನೆ ಆಕಸ್ಮಿಕವೆಂದೂ, ತನ್ನ ತಪ್ಪನ್ನು ನಿವೇದಿಸಿಕೊಂಡರೂ, ಕ್ಷಮಿಸಲಾರದಷ್ಟು ಉದ್ವಿಗ್ನನಾಗಿರುವ, ಕಲ್ಲಿನ ಮನಸ್ಸಿನವನಾಗಿ ಮಾರ್ಪಾಡಾಗಿರುವ ಎಮಾದ್, ವೃದ್ಧನ ಕುಟುಂಬದ ಮುಂದೆ ಆತನನ್ನು ಹಳಿಯಲು ತೀರ್ಮಾನಿಸುತ್ತಾನೆ. ಆಗ ಅಲ್ಲಿಗೆ ಪ್ರವೇಶಿಸುವ ರಾಣ, ಇದಕ್ಕೆ ವಿರುದ್ಧವಾದ ನಿಲುವು ತೆಗೆದುಕೊಳ್ಳುತ್ತಾಳೆ. ಆ ವೃದ್ಧನನ್ನು ಕ್ಷಮಿಸುವಂತೆ ಎಮಾದ್‌ನಲ್ಲಿ ಮೊರೆಯಿಡುತ್ತಾಳೆ. ತನ್ನ ಮಾತು ಮೀರಿ ಪ್ರತಿಕಾರಕ್ಕೆ ಮುಂದಾದರೆ ತಮ್ಮ ಸಂಬಂಧ ಮುರಿದುಬೀಳುವ ಬೆದರಿಕೆಯನ್ನು ಹಾಕುತ್ತಾಳೆ. ಈ ಇಡೀ ಸನ್ನಿವೇಶವನ್ನು ಎಷ್ಟು ಅಪ್ಯಾಯಮಾನವಾಗಿ, ಗಂಭೀರವಾಗಿ ಮತ್ತು ಉದ್ವೇಗವನ್ನು ಹೆಚ್ಚಿಸುವ ರೀತಿಯಲ್ಲಿ ನಿರ್ದೇಶಕ ಮೂಡಿಸುತ್ತಾನೆಂದರೆ ಪ್ರೇಕ್ಷಕರನ್ನು ಒಂದು ನೈತಿಕ ದ್ವಂದ್ವದಲ್ಲಿ ಸಿಲುಕಿಸುತ್ತಾನೆ. ರಾಣ ಕರುಣಾಮೂರ್ತಿಯಾಗಿ, ಕ್ಷಮಯಾ ಧರಿತ್ರಿಯಾಗಿ ಅತಿ ದೊಡ್ಡ ವ್ಯಕ್ತಿಯಂತೆ ಕಂಡರೆ, ಅಂತಹ ದೊಡ್ಡ ತಪ್ಪೇನೂ ಮಾಡದ ಅವಳ ಗಂಡ, ಸಿಟ್ಟಿನ ಆವೇಶದಲ್ಲಿ ತನಗೆ ಒದಗಿರುವ ನೋವು–ನಷ್ಟದ ಪ್ರಮಾಣವನ್ನು ಮಾತ್ರ ಎಣಿಸಿ ಪ್ರತಿಕಾರಕ್ಕೆ ಮುಂದಾಗಿ ಸಣ್ಣವನಾಗುತ್ತಾ ಹೋಗುತ್ತಾನೆ. ಪ್ರತಿಕಾರದ ಬಗ್ಗೆ ಸ್ವಲ್ಪವೂ ದಯೆ ತೋರದ ನಿರ್ದೇಶಕ ಈ ಲೇಖನದ ಆರಂಭದಲ್ಲಿ ಕೊಟ್ಟಿರುವ ರೂಮಿ ಪದ್ಯ 'ಸೂರ್ಯನಂತಿರು ದಯೆ ಮತ್ತು ಕ್ಷಮೆಗೆ/ ಕತ್ತಲಿನಂತಿರು ಮುಚ್ಚಲು ಇತರರ ತಪ್ಪನ್ನು' ಎಂಬುದನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಿರುವಂತೆ ಭಾಸವಾಗುತ್ತದೆ. ಈ ರೂಮಿ ಪದ್ಯಕ್ಕೆ ರುಜುವಾತಿನಂತೆ ನಿಲ್ಲುತ್ತದೆ ನಿರ್ದೇಶಕನ ಈ ಸಿನಿಮಾದ ಆಶಯ. ಒಂದು ಸಮಸ್ಯೆಗೆ ಸಂತ್ರಸ್ತಳಾಗಿದ್ದೂ ಹೆಣ್ಣು ತೋರುವ ಹೃದಯವಂತಿಕೆಗೂ ಗಂಡಿನ ಪ್ರತಿಕಾರಕ್ಕೂ ತುಲನೆ ಮಾಡಿ ಸರಿ ತಪ್ಪುಗಳ ತೀರ್ಮಾನ ನೀಡದೆ